ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ
**Mahatma Gandhi Rural Development and Panchayat Raj University, Gadag**
ಕೌಶಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ, ನಾಗಾವಿ, ಗದಗ-582103
Koushalya Vikas Bhavan, Grama Gangothri Campus, Nagavi, Gadag-582103
**E-mail: mgrdpruadmissions@gmail.com** **Phone: 08372-230338, Fax: 08372-297343**

ನಂ: ಆರ್.ಡಿ.ಪಿ.ಆರ್.ಯು 47 ಶೈಕ್ಷಣಿಕ 2025 ದಿನಾಂಕ: 21-09-2026

**2025-26 ನೇ ಸಾಲಿಗೆ ದ್ವಿತೀಯ ಬ್ಯಾಚ್‌ನ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಸರ್ಟಿಫಿಕೇಟ್ ಕೋರ್ಸ್‌ನ ಪ್ರವೇಶದ ತಿದ್ದುಪಡಿ ಅಧಿಸೂಚನೆ**

**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:21-09-2026**

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ 2025-26 ನೇ ಸಾಲಿಗೆ ದ್ವಿತೀಯ ಬ್ಯಾಚ್‌ನ ಆರು ತಿಂಗಳ ಆಫ್‌ಲೈನ್ / ಆನ್‌ಲೈನ್ ತರಗತಿಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಸರ್ಟಿಫಿಕೇಟ್ ಕೋರ್ಸ್‌ಗೆ ಪಿ.ಯು.ಸಿ. / 10+2 ತರಗತಿಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಕ್ಕೆ ಬಾಕಿ ಉಳಿದ ಸೀಟುಗಳಿಗೆ, ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆಯ ಮೇರೆಗೆ ಅಭ್ಯರ್ಥಿಗಳು ಪ್ರವೇಶ ಶುಲ್ಕ ರೂ. **24000/-** ಗಳನ್ನು, ಪಾವತಿಸಿ ಪ್ರವೇಶವನ್ನು ಪಡೆದುಕೊಳ್ಳುವ ಕೊನೆಯ ದಿನಾಂಕವನ್ನು **07-10-2026** ರ ವರೆಗೆ ವಿಸ್ತರಿಸಲಾಗಿದೆ.

**ಸರ್ಟಿಫಿಕೇಟ್ ಕೋರ್ಸ್**

I. **ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಸರ್ಟಿಫಿಕೇಟ್ ಕೋರ್ಸ್** (Certificate Course in Library and Information Science)

**ಅರ್ಜಿ ಸಲ್ಲಿಸಲು ಸೂಚನೆಗಳು:**

- ಅರ್ಜಿ ನಮೂನೆ ಮತ್ತು ಅರ್ಹತೆ ಹಾಗೂ ಕಾರ್ಯಕ್ರಮಗಳ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ www.ksrdpru.ac.in ನಲ್ಲಿ ನೋಡಿ, ಕಡ್ಡಾಯವಾಗಿ ವಿಶ್ವವಿದ್ಯಾಲಯದ ಆನ್ ಲೈನ್ ತಂತ್ರಾಂಶದಲ್ಲಿ ಅರ್ಜಿಸಲ್ಲಿಸಿ ಅರ್ಜಿ ಶುಲ್ಕವನ್ನು ಪಾವತಿಸಬೇಕು ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ. 200/- ಹಾಗೂ ಪ.ಜಾ / ಪ.ಪಂಗಡ / ಪ್ರವರ್ಗ-೧ / ವಿಕಲಚೇತನರು ರೂ. 100/- ಅರ್ಜಿ ಶುಲ್ಕವನ್ನು ಆನ್‌ಲೈನ್‌ಲ್ಲಿ ಪಾವತಿಸುವುದು ಹಾಗೂ ಆನ್‌ಲೈನ್‌ಲ್ಲಿ ಸಲ್ಲಿಸಿದ ಅರ್ಜಿ ಮತ್ತು ದಾಖಲಾತಿ ಪ್ರತಿಗಳೊಂದಿಗೆ ವಿಶ್ವವಿದ್ಯಾಲಯದ ಪ್ರವೇಶ ವಿಭಾಗದಲ್ಲಿ ಖುದ್ದಾಗಿ ಅಥವಾ ಪೋಸ್ಟ್/ ಕೋರಿಯರ್ ಮುಖಾಂತರ 1 ಪ್ರತಿಯನ್ನು ಕಡ್ಡಾಯವಾಗಿ ಕುಲಸಚಿವರು, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಕೌಶಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ, ನಾಗಾವಿ, ಗದಗ-582103 ಇವರಿಗೆ ಸಲ್ಲಿಸಬಹುದಾಗಿದೆ.
- ವಿಶ್ವವಿದ್ಯಾಲಯದ ಆನ್‌ಲೈನ್ ತಂತ್ರಾಂಶದಲ್ಲಿ ಅಥವಾ ವಿಶ್ವವಿದ್ಯಾಲಯದ ಪ್ರವೇಶ ವಿಭಾಗದಲ್ಲಿ ಖುದ್ದಾಗಿಯೂ ಬಂದು ಅರ್ಜಿಸಲ್ಲಿಸಬಹುದಾಗಿದೆ. ಸದರಿ ಅರ್ಜಿ ಪ್ರತಿಯನ್ನು ಡೌನ್‌ಲೋಡ್ ಮಾಡಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿದ ಎಲ್ಲ ಶೈಕ್ಷಣಿಕ ಹಾಗೂ ಇತರೆ ದಾಖಲಾತಿಗಳ ಒಂದು ಸೆಟ್ ನಕಲು ಪ್ರತಿಗಳೊಂದಿಗೆ ಅರ್ಜಿಯನ್ನು ಪ್ರಿಂಟ್ ತೆಗೆದುಕೊಂಡು, ವಿಶ್ವವಿದ್ಯಾಲಯದ ಪ್ರವೇಶಾತಿ ಕಛೇರಿಗೆ ತಮ್ಮ ಶೈಕ್ಷಣಿಕ ಅರ್ಹತೆಯ ಎಲ್ಲ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸಲ್ಲಿಸಬೇಕು. ಹಾಗೂ ದಾಖಲಾತಿಗಳ ಪರಿಶೀಲನೆಯ ನಂತರ ಪ್ರವೇಶ ಶುಲ್ಕವನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪಾವತಿಸಿ, ತಮ್ಮ ಪ್ರವೇಶಾತಿಯನ್ನು ಪಡೆದುಕೊಳ್ಳಬಹುದು.
- ಅರ್ಜಿಯೊಂದಿಗೆ ಲಗತ್ತಿಸಬೇಕಾದ ಶೈಕ್ಷಣಿಕ ಹಾಗೂ ಇತರೆ ದಾಖಲಾತಿಗಳ ನಕಲು ಪ್ರತಿಗಳು (SSLC / PUC / ITI / JODC / Diploma ಅಂಕಪಟ್ಟಿಗಳು, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಕನ್ನಡ ಮಾಧ್ಯಮ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ, 371 (ಜೆ) ಪ್ರಮಾಣ ಪತ್ರ (ಕಲ್ಯಾಣ ಕರ್ನಾಟಕದ ಪ್ರಮಾಣ ಪತ್ರ) ಹಾಗೂ ಸರಕಾರ ನಿಗದಿಪಡಿಸಿದ ಯಾವುದೇ ಕೋಟಾಗಳ ಪ್ರಮಾಣ ಪತ್ರಗಳು ಇತ್ಯಾದಿ).

- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳು ಸೇರಿದಂತೆ) ಯಾವುದೇ ಮುನ್ಸೂಚನೆ ನೀಡದೇ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಸರ್ಟಿಫಿಕೇಟ್ ಕೋರ್ಸ್ ಸಂಯೋಜಕರನ್ನು ಸಂಪರ್ಕಿಸಬಹುದಾಗಿದೆ

| ಕ್ರ.ಸಂ | ಸರ್ಟಿಫಿಕೇಟ್ ಕೋರ್ಸ್ | ಮೊಬೈಲ್ ನಂ |
|---|---|---|
| 1 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಸರ್ಟಿಫಿಕೇಟ್ ಕೋರ್ಸ್<br>Certificate Course in Library and Information Science | 9035536764 |

**ಪ್ರವೇಶಾತಿ ಮಾಹಿತಿ ಕೇಂದ್ರ ಮೊ: 7975202206 / 7795100729**
**ವಿಶೇಷ ಮಾಹಿತಿಗಾಗಿ ಮೊ: 9972163459 / 7795546151.**

| | | |
|---|---|---|
| 1 | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಿ ಪ್ರವೇಶ ಪಡೆದುಕೊಳ್ಳುವ ಕೊನೆಯ ದಿನಾಂಕ | **07-10-2026** |

**ಸೂಚನೆ:** ಕಾಶ್ಮೀರಿ ವಲಸಿಗರು ಮತ್ತು ಕಾಶ್ಮೀರಿ ಪಂಡಿತರು / ಕಾಶ್ಮೀರಿ ಹಿಂದು ಕುಟುಂಬಗಳ ವಲಸೆರಹಿತರು ಕಾಶ್ಮೀರಿ ಕಣಿವೆಯಲ್ಲಿ ವಾಸಿಸುವವರ ಮಕ್ಕಳಿಗೆ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಸರ್ಟಿಫಿಕೇಟ್ ಕೋರ್ಸ್‌ಗೆ UGC ಹಾಗೂ ಭಾರತ ಸರ್ಕಾರದ ಆದೇಶದಂತೆ ಪ್ರವೇಶಾತಿಯಲ್ಲಿ ನಿಯಮಾನುಸಾರ ಮೀಸಲಾತಿಯನ್ನು ನೀಡಲಾಗುವುದು.

ಆದೇಶ ಮೇರೆಗೆ,
21.09.2026
**ಕುಲಸಚಿವರು**

ಪ್ರತಿಗಳು: ೧) ಆಪ್ತ ಕಾರ್ಯಾಲಯ, ಕುಲಪತಿಗಳು / ಕುಲಸಚಿವರು
೨) ವಿತ್ತಾಧಿಕಾರಿಗಳು
೩) ವಿಶೇಷಾಧಿಕಾರಿಗಳು, ಕುಲಪತಿಗಳು / ಕುಲಸಚಿವರು
೪) ನೋಟಿಸ್ ಬೋರ್ಡ್
೫) ಕಛೇರಿ ಕಡತ
೬) ವಿವಿ ಅಂತರ್ಜಾಲ